ಶ್ರೀ ಎಂ. ರಾಜಶೇಖರಮೂರ್ತಿ (ಆರ್ಥಿಕ ಮತ್ತು ಅಬಕಾರಿ ಸಚಿವರು).—

ಅ) ೧೯೮೫-೮೬ — ೪,೮೪,೬೨,೧೫೩ ಲೀಟರುಗಳು
೧೯೮೬-೮೭ — ೪,೭೨,೭೬,೪೬೭ ಲೀಟರುಗಳು
೧೯೮೭-೮೮ — ೪,೬೧,೨೪,೧೭೪ ಲೀಟರುಗಳು
೧೯೮೮-೮೯ — ೪,೭೮,೩೧,೨೪೬ ಲೀಟರುಗಳು
೧೯೮೯-೯೦ — ೫,೫೭,೭೪,೫೨೨ ಲೀಟರುಗಳು
(೧೧ ತಿಂಗಳು)

ಆ) ೧೯೮೭-೮೮ — ೪,೪೦,೬೪,೦೦೦ ಲೀಟರುಗಳು
೧೯೮೮-೮೯ — ೪,೪೭,೨೮,೦೦೦ ಲೀಟರುಗಳು
೧೯೮೯-೯೦ — ೫,೮೧ ೮೬,೦೦೦ ಲೀಟರುಗಳು
(೧೧ ತಿಂಗಳು)

ಇ) ಹೌದು.

ಈ) ಉ) ಮದ್ಯಸಾರದ ದುರುಪಯೋಗ ಮಾಡಿಕೊಂಡ ಪರವಾನಗಿದಾರರ ಮೇಲೆ ಅಬಕಾರಿ ಕಾಯಿದೆ ಮತ್ತು ಕಾನೂನಿನ ಅನ್ವಯ ಕ್ರಮ ಕೈಗೊಳ್ಳಲಾಗಿದೆ.

ಕೈಗಾರಿಕಾ ಶೆಡ್ಡುಗಳನ್ನು ಹಂಚಿಕೆ ಮಾಡುವಲ್ಲಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ದುರಾಚರಣೆ.

೫೯೫. ಶ್ರೀ ಪೆರಿಕಾಲ್ ಎಂ. ವಂಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಸಣ್ಣ ಕೈಗಾರಿಕೆಗಳ ಉಪ-ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು ಇತ್ತೀಚೆಗೆ ಬೆಂಗಳೂರು ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ಕೈಗಾರಿಕಾ ಮಳಿಗೆಗಳ ಹಂಚಿಕೆಗಾಗಿ ಅರ್ಜಿಗಳನ್ನು ಆಹ್ವಾನಿಸಿದೆಯೇ ?

ಆ) ಹಾಗಿದ್ದಲ್ಲಿ, ಸ್ವೀಕೃತವಾದ ಅರ್ಜಿಗಳ ಸಂಖ್ಯೆ.

ಇ) ಈವರೆವಿಗೂ ಹಂಚಿಕೆಯಾದ ಮಳಿಗೆಗಳ ಸಂಖ್ಯೆ.

ಈ) ಉದ್ಯಮಿಗಳಿಗೆ ಮಳಿಗೆಗಳ ಹಂಚಿಕೆಗಾಗಿ ಅಳವಡಿಸಿಕೊಂಡ ವಿಧಾನ.

ಉ) ಅನೇಕ ಸಲ ಪ್ರಯತ್ನ ಮಾಡಿರುವ ಅರ್ಜಿದಾರರಿಗೂ ಈ ಮಳಿಗೆಗಳು ಹಂಚಿಕೆಯಾಗಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಊ) ಹಾಗಿದ್ದಲ್ಲಿ, ಪ್ರತಿ ಉದ್ಯಮಿಯೂ ಮಾಡಿರುವ ಪ್ರಯತ್ನಗಳ ಸಂಖ್ಯೆಯ ಬಗ್ಗೆ ಪಟ್ಟಿ ತಯಾರಿಸದಿರಲು ಕಾರಣ.

ಶ್ರೀಮತಿ ಸುಮಾ ವಸಂತ (ಸಣ್ಣ ಕೈಗಾರಿಕೆಗಳ ಉಪಸಚಿವೆಯರು).—

ಅ) ಹೌದು.

ಆ) ೨೩೪.

ಇ) ಇತ್ತೀಚಿನ ಪ್ರಕಟಣೆಯ ಮೇರೆಗೆ ಇನ್ನೂ ಯಾವುದೂ ಹಂಚಿಕೆಯಾಗಿಲ್ಲ.

ಈ) ಅಳವಡಿಸಿಕೊಂಡ ವಿಧಾನ

ಅ) ಅರ್ಜಿಗಳನ್ನು ಪತ್ರಿಕಾ ಪ್ರಕಟಣೆಯ ಮೂಲಕ ಆಹ್ವಾನಿಸುವುದು.

ಆ) ಸರ್ಕಾರದ ಆದೇಶದಂತೆ ಕೆಲವು ವರ್ಗಗಳಿಗೆ ಮಳಿಗೆಗಳನ್ನು ವಿಶೇಷವಾಗಿಡುವುದು.

(ಇ) ಕೈಗಾರಿಕೆಯ ಅರ್ಹತೆ, ವಿದ್ಯುಚ್ಛಕ್ತಿ ಅಗತ್ಯ, ಯೋಜನೆಯಲ್ಲಿ ಉದ್ದೇಶಿತ ಉದ್ಯೋಗಿಗಳ ಸಂಖ್ಯೆ, ಮಾಲಿನ್ಯ ಪರಿಣಾಮಗಳು, ನೀರಿನ ಅವಶ್ಯಕತೆ, ಅರ್ಜಿದಾರರು ಸ್ಥಳೀಯರೆ, ಹೊರಗಿನವರೆ, ಕೈಗಾರಿಕೆಯನ್ನು ನಡೆಸಲು ಅರ್ಜಿದಾರರ ಸಾಮರ್ಥ್ಯ ಇವುಗಳ ಆಧಾರದ ಮೇಲೆ ಅರ್ಜಿಗಳ ಪರಿಶೀಲನೆಯನ್ನು ಪರಿಶೀಲನಾ ಸಮಿತಿ ನಡೆಸುವುದು. ಮೇಲಿನ ಅಂಶಗಳ ಆಧಾರದ ಮತ್ತು ಪರಿಶೀಲನಾ ಸಮಿತಿಯ ಶಿಫಾರಸ್ಸಿನ ಮೇಲೆ ರಾಜ್ಯಮಟ್ಟದ ಹಂಚಿಕೆ ಸಮಿತಿಯು ಅಂತಿಮ ತೀರ್ಮಾನ ಕೈಗೊಳ್ಳುವುದು.

(ಉ) ಇಲ್ಲ.

(ಊ) ಪ್ರಶ್ನೆ (ಈ)ಗೆ ಉತ್ತರಿಸಿರುವ ಪ್ರಕಾರ ಮಳಿಗೆಗಳನ್ನು ಅರ್ಹತೆ ಮತ್ತು ಸಂಭಾವ್ಯತೆ ಆಧಾರದ ಮೇಲೆ ಹಂಚಿಕೆ ಮಾಡುವುದರಿಂದ, ಪ್ರಯತ್ನಗಳನ್ನು ಪರಿಗಣಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಬೆಂಗಳೂರು ನಗರದಲ್ಲಿ ನಕಲಿ ಮೈಸೂರು ಸ್ಯಾಂಡಲ್ ಸೋಪು

೫೯೩. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).— ಮಾನ್ಯ ಕೈಗಾರಿಕಾ, ಇಂಧನ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಬೆಂಗಳೂರು ನಗರದ ಮಾರುಕಟ್ಟೆಯಲ್ಲಿ ನಕಲಿ ಮೈಸೂರು ಸ್ಯಾಂಡಲ್ ಸೋಪುಗಳನ್ನು ಮಾರಲ್ಪಡುತ್ತವೆ ಎಂಬುದು ನಿಜವೆ?

(ಆ) ಹಾಗಾದಲ್ಲಿ ಮಾರುಕಟ್ಟೆಯಲ್ಲಿ ಲಭ್ಯವಿರುವ ನಕಲಿ ಮೈಸೂರು ಸ್ಯಾಂಡಲ್ ಸೋಪುಗಳನ್ನು ಪತ್ತೆ ಹಚ್ಚಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್. ಎಂ. ಯಾಹ್ಯಾ (ಕೈಗಾರಿಕಾ, ಇಂಧನ ಮತ್ತು ವಕ್ಫ್ ಸಚಿವರು).—

(ಅ) ಬೆಂಗಳೂರು ನಗರದ ಮಾರುಕಟ್ಟೆಯಲ್ಲಿ ನಕಲಿ ಮೈಸೂರು ಸ್ಯಾಂಡಲ್ ಸೋಪು ಮಾರಾಟ ಮಾಡುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

(ಆ) ಉದ್ಭವಿಸುವುದಿಲ್ಲ.

೧೯೮೭ ರಿಂದ ೧೯೯೦ರ ಅವಧಿಯಲ್ಲಿ ಪ್ರಾರಂಭಿಸಿದ ಸಣ್ಣ ಪ್ರಮಾಣದ ಕೈಗಾರಿಕೆಗಳು

೫೯೪. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).— ಮಾನ್ಯ ಸಣ್ಣ ಕೈಗಾರಿಕೆಗಳ ಉಪ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ೧೯೮೭-೮೮ರಿಂದ ಮಾರ್ಚ್ ೯೦ರ ಅಂತ್ಯದವರೆಗೆ ಪ್ರಾರಂಭಿಸಲಾದ ಸಣ್ಣ ಪ್ರಮಾಣದ ಕೈಗಾರಿಕೆಗಳ ಸಂಖ್ಯೆ ಎಷ್ಟು ?

(ಆ) ಈ ಕೈಗಾರಿಕೆಗಳನ್ನು ಯಾವ ಸ್ಥಳಗಳಲ್ಲಿ ಪ್ರಾರಂಭಿಸಲಾಯಿತು.

(ಇ) ಅವುಗಳ ಪೈಕಿ ರೋಗಗ್ರಸ್ಥವಾದ ಕೈಗಾರಿಕೆಗಳ ಸಂಖ್ಯೆ (ರೋಗಗ್ರಸ್ಥ ಕೈಗಾರಿಕೆಗಳ ವಿವರಗಳನ್ನು ನೀಡುವುದು)

(ಈ) ರೋಗಗ್ರಸ್ಥವಾದುದಕ್ಕೆ ಕಾರಣ.

ಶ್ರೀಮತಿ ಸಮಾ ವಸಂತ (ಸಣ್ಣ ಕೈಗಾರಿಕೆಗಳ ಉಪ ಸಚಿವೆಯರು).—

(ಅ) ೧೯೮೭-೮೮ರಿಂದ ಮಾರ್ಚ್ ೯೦ರ ಅಂತ್ಯದವರೆಗೆ ಪ್ರಾರಂಭಿಸಿದ ಸಣ್ಣ ಪ್ರಮಾಣದ ಕೈಗಾರಿಕೆಗಳು ಕೆಳಕಂಡಂತಿದೆ.—

ವರ್ಷ	ಸಣ್ಣ ಪ್ರಮಾಣದ ಕೈಗಾರಿಕೆಗಳ ಸಂಖ್ಯೆ
೧೯೮೭-೮೮	೧೦,೫೩೦
೧೯೮೮-೮೯	೯,೮೧೧
೧೯೮೯-೯೦	೯,೭೦೦
ಒಟ್ಟು	೩೦,೦೪೧